ಸಾಕ್ಷಿಯನ್ನು ದಿ: 28.01.2025 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ–2

**ಪಾಟೀಸವಾಲುಃ– ಪ್ರತಿವಾದಿಗಳ ಪರ ವಕೀಲರಿಂದ:–**

1. ವಾದಿ ನನಗೆ ಅಣ್ಣನಾಗಬೇಕು. ಪ್ರತಿವಾದಿ ದಾವಾ ಆಸ್ತಿ ನನಗೆ ಸೇರಿದ್ದು ಎಂದು ಹೇಳಿದ್ದಕ್ಕೆ ವಾದಿ ಈ ದಾವೆ ಸಲ್ಲಿಸಿರುತ್ತಾನೆ. ದಾವಾ ಆಸ್ತಿ ಅಕ್ಕಪಕ್ಕ ನನಗೆ ಸೇರಿದ ಆಸ್ತಿಯಿಲ್ಲ. ದಾವಾ ಆಸ್ತಿ ಈ ಮೊದಲು ಅಂದಾನಿಗೌಡ ಹೆಸರಿಗೆ ಇತ್ತು. ದಾವಾ ಆಸ್ತಿ 29 * 93 ವಿಸ್ತೀರ್ಣ ಇರುತ್ತದೆ. ಯಾವ ವರ್ಷ ಅಂದಾನಿಗೌಡನ ಹೆಸರಿಗೆ ದಾವಾ ಆಸ್ತಿಯ ಖಾತೆಯಿತ್ತು ನೆನಪಿಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆಃ ಬೋರೇಗೌಡ, ಪಶ್ಚಿಮಕ್ಕೆಃ ಮೊಳ್ಳೇಗೌಡ, ಉತ್ತರಕ್ಕೆಃ ರಸ್ತೆ, ದಕ್ಷಿಣಕ್ಕೆಃ ಪ್ರತಿವಾದಿ ಆಸ್ತಿ ಇರುತ್ತದೆ. ದಾವಾ ಆಸ್ತಿಯಲ್ಲಿ ವಾದಿ ಮನೆ ಕಟ್ಟಿರುತ್ತಾನೆ ಆದರೆ ಸದರಿ ಮನೆಯ ವಿಸ್ತೀರ್ಣ ಗೊತ್ತಿಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ಪ್ರತಿವಾದಿಯ ವಾಸದ ಮನೆಯಿದೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಪ್ರತಿವಾದಿಯ ಖಾಲಿ ಜಾಗ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯನ್ನು ವಾದಿ ಬರೆಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಸಂಗಂತಿಗಳು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ವಾದಿ ದಾವಾ ಆಸ್ತಿಯಲ್ಲಿ ಎಷ್ಟು ವಿಸ್ತೀರ್ಣಕ್ಕೆ ಮನೆ ಕಟ್ಟಿದ್ದಾನೆಂದು ಬರೆಸಿಲ್ಲ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿ ಮತ್ತು ಪ್ರತಿವಾದಿ ಮಧ್ಯೆಯ ಗಲಾಟೆಯಾಗಿತ್ತು ಎಂದರೆ ಸರಿ. ನಾನು ಮತ್ತು ವಾದಿ ಷರೀಕ್ಕಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಗೆ ಇ–ಸ್ವತ್ತು ಮಾಡಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ನಿಖರವಾದ ವಿಸ್ತೀರ್ಣ ಗೊತ್ತಿಲ್ಲ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿಗೆ ಹಕ್ಕು, ಅಧಿಕಾರ ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಪಂಚಾಯಿತಿಯವರ ಜೊತೆ ಷರೀಕ್ಕಾಗಿ ದಾಖಲಾತಿ ಸೃಷ್ಠಿ ಮಾಡಿಕೊಜಡಿರುತ್ತಾಂನೆಂದರೆ ಸರಿಯಲ್ಲ. ವಾದಿ ನನ್ನ ಅಣ್ಣನಾದ ಕಾರಣ ಅವನ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ